ಸಾಕ್ಷಿಯನ್ನು ದಿನಾಂಕ **19-09-2024** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಜೆ.ಹೆಚ್. ವಕೀಲರಿಂದಃ**

ಪ್ರಸ್ತುತ ದಾವೆಯನ್ನು ದಾಖಲು ಮಾಡಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ದಾವಾ ಆಸ್ತಿಗಳ ಪೈಕಿ 2ನೇ ಆಸ್ತಿಯು ನನ್ನ ಪತ್ನಿಗೆ ಪಾಲು ವಿಭಾಗ ಪತ್ರದ ಮೂಲಕ ಬಂದಿರುತ್ತದೆ. ದಾವಾ ಆಸ್ತಿಗಳ ಪೈಕಿ 1ನೇ ಆಸ್ತಿಯನ್ನು ನನ್ನ ಪತ್ನಿಯ ತಾಯಿಯಾದ ರಾಜೀವಿ ರೈ ಎನ್ನುವವರು ನನ್ನ ಪತ್ನಿಗೆ ದಾನಪತ್ರದ ಮೂಲಕ ನೀಡಿದ್ದಾಗಿರುತ್ತದೆ.

ನಿಪಿ-2 ರಲ್ಲಿ ನಾನು ದಾವೆಯಲ್ಲಿ ಹೇಳಿದ ದಾರಿಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-3 ರಲ್ಲಿಯೂ ಸಹ ದಾರಿಯ ಹಕ್ಕಿನ ಕುರಿತು ವಿಶೇಷವಾಗಿ ನಮೂದಿಸಿರುವುದಿಲ್ಲ ಎಂದರೆ ಸರಿ.

ದಾವಾ ಶೆಡ್ಯೂಲು ಒಟ್ಟು ಆಸ್ತಿಗೆ ಲಗ್ತೀಯಾಗಿ ಸುಮಾರು 10 ಎಕ್ರೆ ಕುಮ್ಕಿ ಆಸ್ತಿ ಇರುತ್ತದೆ. ದಾವಾ ಶೆಡ್ಯೂಲು 1ನೇ ಆಸ್ತಿಯಲ್ಲಿ ನನ್ನ ಪತ್ನಿಯ ತಾಯಿಯ ಹಳೆಯ ಮನೆ ಇರುತ್ತದೆ. ಸದರಿ ಮನೆಗೆ ರಸ್ತೆಯ ಸೌಕರ್ಯ ಇರುತ್ತದೆ.

ನಮ್ಮ ಮನೆಯಿಂದ ದಾವಾ ಶೆಡ್ಯೂಲು 2ನೇ ಆಸ್ತಿಗೆ ಸುಮಾರು 500-600 ಮೀಟರು ದೂರವಿರಬಹುದು. ದಾವಾ ಶೆಡ್ಯೂಲು ಆಸ್ತಿಗಳು ನನ್ನ ಪತ್ನಿಗೆ ಬರುವ ಪೂರ್ವದಲ್ಲಿ ನನ್ನ ಪತ್ನಿಯ ತಾಯಿಯೇ ಸದರಿ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಿಪಿ-1 ರ ವಿಭಾಗಪತ್ರದ ಆದ ಲಾಗ್ಾಯ್ತು ನಿಪಿ-3 ರ ದಾನ ಪತ್ರ ಆಗುವವರೆಗೆ ದಾರಿಯ ಹಕ್ಕಿನ ಕುರಿತು ವಿವಾದ ಇರಲಿಲ್ಲ ಎಂದರೆ ಸರಿ. ನಿಪಿ-3 ರ ದಾನಪತ್ರ ಆದ 5 ವರ್ಷಗಳವರೆಗೂ ದಾರಿಯ ಹಕ್ಕಿನ ಕುರಿತು ಯಾವುದೇ ವಿವಾದ ಇರಲಿಲ್ಲ.

1ನೇ ಪ್ರತಿವಾದಿಯು ಬೆಂಗಳೂರಿನ ಖಾಯಂ ನಿವಾಸಿಯಾಗಿರುತ್ತಾರೆ. 2ನೇ ಪ್ರತಿವಾದಿಯು ಬೆಂಗಳೂರು ಹಾಗೂ ಮುಂಬೈನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 2017 ರಲ್ಲಿ ನನ್ನ ಪತ್ನಿಯ ತಾಯಿಯಾದ ರಾಜೀವಿ ರೈಯವರು ಕಾಲವಾಗಿದ್ದು, ಅಲ್ಲಿಯವರೆಗೂ ಇಬ್ಬರು ಪ್ರತಿವಾದಿಗಳು ದಾವಾ ಆಸ್ತಿಗಳಿಗೆ ಆಗಾಗ್ಗೆ ಬಂದು-ಹೋಗಿ ಮಾಡುತ್ತಿದ್ದರು ಎಂದರೆ ಸರಿ. ದಾವಾ ಶೆಡ್ಯೂಲು ಆಸ್ತಿಗಳನ್ನು ನನ್ನ ಪತ್ನಿಯ ತಾಯಿಯು ನಿರ್ವಹಿಸುತ್ತಿದ್ದು, ಅವರು ಕಾಲವಾದ ನಂತರ ನಾನು ಸದರಿ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದೆ.

ನನ್ನ ಪತ್ನಿಯ ತಾಯಿಯ ಕಾಲವಾದ ನಂತರ ಪ್ರತಿವಾದಿಗಳು ದಾವಾ ಆಸ್ತಿಗೆ ನಿಯಮಿತವಾಗಿ ಬಾರದೇ ಆಗಾಗ್ಗೆ ಬಂದು-ಹೋಗಿ ಮಾಡುತ್ತಿದ್ದರು. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಿ ವಾಸ ಮಾಡಿರುವುದಿಲ್ಲ. ನಿಪಿ-2 ರ ವಿಭಾಗ ಪತ್ರದ ನಂತರ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದ 1972 ರ ಸಮಯದಲ್ಲಿ ಪ್ರತಿವಾದಿಗಳು ಅಪ್ರಾಪ್ತರಾಗಿದ್ದರು ಎಂದು ನುಡಿಯುತ್ತಾರೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ವಿವಾದಿತ ದಾರಿಯು ದಾವಾ ಆಸ್ತಿಯ 1ನೇ ಆಸ್ತಿಯಲ್ಲಿರುವ ಮನೆಯಿಂದ ಯಾವ-ಯಾವ ಸರ್ವೆ ನಂಬ್ರಗಳ ಮೂಲಕ ಹಾದು ಹೋಗುತ್ತದೆ ಎಂದರೆ ಸಾಕ್ಷಿಯು ಮೊದಲು 2ನೇ ಪ್ರತಿವಾದಿಯ ಆಸ್ತಿಯ ಮೂಲಕ ದಾರಿಯು ಹಾದು ಹೋಗಿ ನಂತರ 1ನೇ ಪ್ರತಿವಾದಿಯ ಆಸ್ತಿಯ ಮುಖೇನ ಹಾದು ಹೋಗುತ್ತದೆ ಎಂದು ನುಡಿಯುತ್ತಾರೆ.

ಶೋಭಾ ಎಂ.ರೈ W/o. ಮೋಹನ್ ದಾಸ್ ರೈ ಎನ್ನುವವರು ನನ್ನ ಪತ್ನಿಯ ಅಕ್ಕನಾಗಿರುತ್ತಾರೆ. ನನ್ನ ಪತ್ನಿ ಮತ್ತು ಶೋಭಾ ಎನ್.ರೈ ರವರ ಆಸ್ತಿಗಳು ಅದಲು-ಬದಲು ಆಗಿರುತ್ತದೆ ಎಂದರೆ ಸರಿ. ಸದರಿ ಅದಲು-ಬದಲಾದ ಆಸ್ತಿಗಳನ್ನು ನಾವು ಸರಿಪಡಿಸಿಕೊಂಡಿರುತ್ತೇವೆ. ಸದರಿ ಅದಲು-ಬದಲಾದ ಆಸ್ತಿಗಳ ಕುರಿತು ಡಿ.ಡಿ.ಎಲ್.ಆರ್.ನ್ಯಾಯಾಲಯದ ಆದೇಶದಂತೆ ನನ್ನ ಪರವಾಗಿ ತೀರ್ಪು ಆಗಿ ಸದರಿ ಆಸ್ತಿಗಳನ್ನು ಸರಿಪಡಿಸಿಕೊಂಡಿರುತ್ತೇವೆ. ಈ ಕುರಿತು ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂಬುದಾಗಿ ನನಗೆ ನೆನಪು ಇರುತ್ತದೆ. ಸದರಿ ಅದಲು-ಬದಲು ಆಸ್ತಿಗಳ ಕುರಿತು ಸರಿಯಾಗಿರುವ ಕುರಿತು ಆದೇಶದ ದಾಖಲೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬ್ರ 75/1ಬಿಯು ಪ್ಲಾಟಿಂಗ್ ಆಗುವಾಗ ಸರ್ವೆ ನಂಬ್ರ 75/1 ಬಿ ನನ್ನ ಹಕ್ಕಿನ 2.00 ಎಕ್ರೆ ಮತ್ತು ಉಳಿದ 1.87 ಎಕ್ರೆಯು ನನ್ನ ಪತ್ನಿಯ ಅಕ್ಕನಾದ ಶೋಭಾ ಎನ್.ರೈ ಯವರಿಗೆ ಅದಲು-ಬದಲಾಗಿರುತ್ತದೆ. ಸದರಿ ಎರಡು ಆಸ್ತಿಗಳು ನನ್ನ ಪತ್ನಿಯ ತಾಯಿಯಿಂದ ನನ್ನ ಪತ್ನಿಗೆ

ಬಂದಿರುತ್ತದೆ ಎಂದರೆ ಸರಿ. ಆ ರೀತಿ ನನ್ನ ಪತ್ನಿ ಹಾಗೂ ನನ್ನ ಪತ್ನಿಯ ಅಕ್ಕನಿಗೆ ಅದಲು-ಬದಲಾಗಿರುವುದಿಲ್ಲ ಎಂದರೆ ಸರಿಯಲ್ಲ.

ವಿವಾದಿತ ದಾರಿಯು ನಿಖರವಾಗಿ ಯಾವ ಸರ್ವೆ ನಂಬರಿನಿಂದ ಹಾದು ಹೋಗುತ್ತದೆ ಎಂದು ನನಗೆ ತಿಳಿಯುವುದಿಲ್ಲ. ಸಾಕ್ಷಿ ಮುಂದುವರೆದ ಸದರಿ ಆಸ್ತಿಯು ದೊಡ್ಡ ಪ್ರಮಾಣದಲ್ಲಿರುವುದರಿಂದ ನನಗೆ ಸದರಿ ಕಾಲುದಾರಿಯು ಯಾವ ಸರ್ವೆ ನಂಬರಿನಿಂದ ಹಾದು ಹೋಗುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಕಾಲುದಾರಿಯು 3 ಫೀಟ್ ನ ಅಗಲದ ಕಾಲುದಾರಿಯಾಗಿರುತ್ತದೆ.

ನಿಪಿ-2 ರ ಪಾಲುಪಟ್ಟಿಯ ಪ್ರಕಾರ ನನ್ನ ಪತ್ನಿಯು ಸೇರಿ 11 ಜನರಿಗೆ ಆಸ್ತಿಯು ಪಾಲಾಗಿರುತ್ತದೆ.

ಪ್ರಸ್ತುತ ದಾವೆಯನ್ನು ಹೊರತುಪಡಿಸಿ ಪ್ರಸ್ತುತ ದಾವೆಯ ಯಾವುದೇ ಹಿಸ್ಸೆದಾರರಿಗೂ ದಾರಿಯ ಹಕ್ಕಿನ ಕುರಿತು ಯಾವುದೇ ವಿವಾದ ಬಂದದ್ದಿಲ್ಲ ಎಂದರೆ ಸರಿ. ಪ್ರತಿವಾದಿಗಳು ದಾರಿಯ ಹಕ್ಕಿನ ಆಕ್ಷೇಪಪಡಿಸಿರುತ್ತಾರಾ ಎಂದರೆ ಸಾಕ್ಷಿಯ 2018 ರ ನವೆಂಬರ್ ತಿಂಗಳಲ್ಲಿ ನಮ್ಮ ಮನೆಯಿಂದ ಅವರ ಮನೆಗೆ ಹೋಗುವ ಜಾಗಕ್ಕೆ 2ನೇ ಪ್ರತಿವಾದಿ ಹಾಗೂ ಆತನ ಸಹೋದರನಾದ ಪ್ರೀತಮ್ ರೈಯವರು ಬೇಲಿ ಹಾಕಿ ಆ ಮೂಲಕ ದಾರಿಯ ಕುರಿತು ಅಡ್ಡಿಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ದಾರಿಯ ಹಕ್ಕಿನ ಕುರಿತು ಯಾವುದೇ ಆಕ್ಷೇಪವನ್ನು ಮಾಡಿದ್ದಿಲ್ಲ. ಈ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಕುರಿತು ನಾನು ಪ್ರತಿವಾದಿಗಳ ವಿರುದ್ಧ ಪೊಲೀಸ್ ದೂರನ್ನು ಸಲ್ಲಿಸಿರುತ್ತೇನೆ. ಈ ಬಗ್ಗೆ 2ನೇ ಪ್ರತಿವಾದಿಯು ಪೊಲೀಸ್ ಠಾಣೆಗೆ ಬಂದಿರುತ್ತಾರಾ ಎಂದರೆ ಸಾಕ್ಷಿಯು ಇಬ್ಬರು ಪ್ರತಿವಾದಿಗಳು ಠಾಣೆಗೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ನನ್ನನ್ನು ಹಾಗೂ ಪ್ರತಿವಾದಿಗಳನ್ನು ಕರೆದು ದಾರಿಯ ಬಗ್ಗೆ ವಿಚಾರಿಸಿದ್ದಾರಾ ಎಂದರೆ ಸಾಕ್ಷಿಯು ಪ್ರತಿವಾದಿಗಳು ಠಾಣೆಗೆ ಹೋದದ್ದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಪಹಣಿ ಪತ್ರದಲ್ಲಿ ದಾರಿಯ ಹಕ್ಕಿನ ಬಗ್ಗೆ ನಮೂದು ಇರುತ್ತದಾ ಎಂದರೆ ಸಾಕ್ಷಿಯು ಪಹಣಿಯಲ್ಲಿ ನಮೂದು ಇರುವುದಿಲ್ಲ ಎಂದು ನುಡಿಯುತ್ತಾರೆ. ಆದರೆ ವಿಭಾಗ ಪತ್ರ ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಐಟಂ ನಂಬ್ರ 1ರ ಆಸ್ತಿಯ ಪಹಣಿಯನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುತ್ತೇನೆ.

ಈಗ ದಾವಾ ಶೆಡ್ಯೂಲು 1ನೇ ಆಸ್ತಿಯ ಸರ್ವೆ ನಂಬ್ರ 75/3 ಆಗಿರುತ್ತದೆ. ಸರ್ವೆ ನಂಬ್ರ 75/3 ಎಂದು ಆಗಿರುವ ಬಗ್ಗೆ ದಾಖಲೆಯು ನನ್ನ ಬಳಿ ಇದ್ದು, ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

ನಿಪಿ-3 ರ ದಾನ ಪತ್ರದಲ್ಲಿ ದಾವಾ ಆಸ್ತಿಯಲ್ಲಿರುವ ಕಾಲುದಾರಿಯ ಊರ್ಜಿತದ ಬಗ್ಗೆ ನಮೂದಿಸುವ ಕುರಿತು ನಾನು ನನ್ನ ಪತ್ನಿಯ ತಾಯಿಯಲ್ಲಿ ಕೇಳಿಕೊಂಡಿರುವುದಿಲ್ಲ. ದಾವಾ ಶೆಡ್ಯೂಲು ಆಸ್ತಿಯಲ್ಲಿ ಕಾಲುದಾರಿ ಇದೆಯೆಂದು ರುಜುವಾತುಪಡಿಸಲು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನ್ಯಾಯಾಲಯದಿಂದ ನಿಯೋಗಿಯವರನ್ನು ನೇಮಕ ಮಾಡಲು ನನ್ನ ಆಕ್ಷೇಪವಿರುವುದಿಲ್ಲ. ದಾವಾ ಶೆಡ್ಯೂಲು 2ನೇ ಆಸ್ತಿಯನ್ನು ನನ್ನ ಪತ್ನಿಯ ತಾಯಿಯು ನನ್ನ ಪತ್ನಿಗೆ ದಾನ ಪತ್ರದ ಮೂಲಕ ನೀಡಿದ ಕಾರಣ ನಮ್ಮ ಬೇರೆ ಆಸ್ತಿಗೆ ಹೋಗಿ-ಬರಲು ಬೇರೆ ದಾರಿ ಇಲ್ಲವಾಗಿರುತ್ತದೆ ಎಂದರೆ ಸಾಕ್ಷಿಯು ಮೊದಲಿನಿಂದಲೂ ನಮಗೆ ಇದುವೇ ಕಾಲುದಾರಿಯಾಗಿದ್ದು, ಬೇರೆ ದಾರಿ ಇರಲಿಲ್ಲ ಎಂದು ನುಡಿಯುತ್ತಾರೆ. ದಾನ ಪತ್ರ ಆಗುವ ಪೂರ್ವದಲ್ಲಿ ದಾವಾ ಶೆಡ್ಯೂಲು 2ನೇ ಆಸ್ತಿಯಿಂದ ಪ್ರತಿವಾದಿಗಳ ಆಸ್ತಿಯ ಮೂಲಕ ಬೇರೊಂದು ಆಸ್ತಿಗೆ ಹೋಗಿ-ಬರಲು ಬೇರೆ ದಾರಿ ಇರಲಿಲ್ಲ ಎಂದರೆ ಸರಿ.

ಪ್ರತಿವಾದಿಗಳ ಆಸ್ತಿಗೆ ಹೋಗಿ-ಬರಲು ಈಗ ಪ್ರತ್ಯೇಕ ರಸ್ತೆಯನ್ನು ನಿರ್ಮಿಸಿರುತ್ತಾರೆ. ಪ್ರತಿವಾದಿಗಳ ಹೊರತಾಗಿ ನಿಪಿ-2 ರ ವಿಭಾಗಪತ್ರದ ಉಳಿದ ಹಿಸ್ಸೆದಾರರಿಗೆ ಪ್ರತ್ಯೇಕವಾದ ರಸ್ತೆಯು ಇದೆಯೇ ಎಂದರೆ ಅವರುಗಳು ಪ್ರತ್ಯೇಕವಾಗಿ ರಸ್ತೆಯನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಅದರಂತೆ ಅನುಮತಿಸಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ.ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸುಳ್ಯ.ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ